**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

C.C. No.3134/2024

CW-8 PW:4

ಸಾಕ್ಷಿಯ ಹೆಸರು ಃ ಮಂದಾಕಿನಿ ಶೀಗಿಹಳ್ಳಿ
ತಂದೆ /ಗಂಡನ ಹೆಸರು ಃ ಮಲ್ಲೇಶಪ್ಪ
ವಯಸ್ಸು ಃ 40 ವರ್ಷ
ಉದ್ಯೋಗ ಃ ಖಾಸಗಿ ಕೆಲಸ
ವಾಸಸ್ಥಳ ಃ ಹೋಸೂರ, ಹುಬ್ಬಳ್ಳಿ

ದಿಃ 04.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ನಾನು ಭಗತ್ ಸಿಂಗ್ ಕಾಟನ್ ಮಾರ್ಕೇಟ್ ನಲ್ಲಿರುವ Muthoot Finance ನಲ್ಲಿ Branch Manager ಆಗಿ ಕೆಲಸ ಮಾಡುತ್ತಿದ್ದೇನೆ. ಆ ಸಮಯದಲ್ಲಿ ಮಂಜುನಾಥ ಗಾಣಿಗೇರ ಎಂಬ ವ್ಯಕ್ತಿ ಸಾಲ ಕೇಳಲು ಬಂದಿದ್ದ. ನಾವು ಸಾಲ ಮಾಡಿಕೊಟ್ಟೇವು. ಒಂದು ವಾರದ ನಂತರ ದೀ 17/03/2023 ರಂದು ಪೊಲೀಸರು ನಮ್ಮ ಬ್ಯಾಂಕಿಗೆ ಬಂದಾಗ ಅಡವಿಟ್ಟ ಆಭರಣವನ್ನು ಕಳುವು ಮಾಡಿಕೊಂಡು ಬಂದಿದ್ದು ಎಂದು ಗೊತ್ತಾಯಿತು. ಅಡವಿಟ್ಟ ಆಭರಣ ನವಗ್ರಹ ಉಂಗುರವಾಗಿತ್ತು. ಪೊಲೀಸರು ಅಡವಿಟ್ಟ ಉಂಗುರವನ್ನು ತಮಗೆ ಕೊಡುವಂತೆ ಅರ್ಜಿ ಕೊಟ್ಟರು ನಾವು ಸದರಿ ವಿಷಯವನ್ನು ನಮ್ಮ ಮುಖ್ಯ ಕಚೇರಿಯ ಗಮನಕ್ಕೆ ತಂದೆವು. ಅದಾದ ನಂತರ ಚಾಸಾ.9 ನಮ್ಮ ಬ್ಯಾಂಕಿಗೆ ಬಂದಿದ್ದರು ಹಾಗೂ ಅವರು ಅಡವಿಟ್ಟ ಬಂಗಾರವನ್ನು ಪರೀಕ್ಷಿಸಿ ತೂಕ ನೋಡಿ ಕೊಟ್ಟರು. ಆ ಉಂಗುರವನ್ನು ಪೊಲೀಸರಿಗೆ ನೀಡಿರುತ್ತೇವೆ. ಸದರಿ ಸಮಯದಲ್ಲಿ ಪೊಲೀಸರು ಹಾಗೂ ಮಂಜುನಾಥ ಗಾಣಿಗೇರ ಮತ್ತು ಬೇರೆ ಇಬ್ಬರು ಆರೋಪಿಗಳು ಇದ್ದರು. ಸದರಿ ಸಮಯದಲ್ಲಿ ಪೊಲೀಸರು ಫೋಟೋ ಸಹ ತೆಗೆದಿರುತ್ತಾರೆ. ಸದರಿ ಸಮಯದಲ್ಲಿ ನಿಪಿ.4, 5, 6, 7 ಫೋಟೋಗಳನ್ನು ತೆಗೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ.3 ಇವರನ್ನು ಸಾಕ್ಷಿ ಗುರುತಿಸುತ್ತಾರೆ ಆದರೆ ಬೇರೆ ಆರೋಪಿಗಳನ್ನು ಗುರುತಿಸುವುದಿಲ್ಲ. ನಿಪಿ.7 ರಲ್ಲಿ ಕಾಣುವ ಉಂಗುರವನ್ನೇ ಆರೋಪಿ ನಂ.3 ನಮ್ಮ ಹತ್ತಿರ ಅಡವಿಟ್ಟಿದ್ದ.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿ ಪರ ಶ್ರೀ.ಕೆ ಬಿ ಎಸ್ ವಕೀಲರಿಂದಃ**

Muthoot Finance ನಲ್ಲಿ ಹೊಸದಾಗಿ ಬಂದ ವ್ಯಕ್ತಿಗೆ ಸಾಲ ನೀಡುವುದಿಲ್ಲ ಹಾಗೂ ರೆಫರೆನ್ಸ ಇದ್ದರೆ ಮಾತ್ರ ಸಾಲ ನೀಡುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಂ.3 ಆ ದಿನ ನಮ್ಮ ಶಾಖೆಗೆ ಬಂ ದಿದ್ದರು ಎಂದು ಸಿಸಿ ಟಿವಿ ಫೂಟೇಜ್ ಇದೆಯಾ ಅಥವಾ ಇಲ್ಲ ಎಂದು ನನಗೆ ಯಾವತ್ತೂ ಕೇಳಿಲ್ಲ ಎಂದರೆ ಸರಿ. ಆ ದಿನ ಪೊಲೀಸರ ಜೊತೆ ಆರೋಪಿ ನಂ.3 ಬಂದಿದ್ದರು ಹಾಗೂ ಮತ್ತಿಬ್ಬರು ಸಹ ಬಂದಿದ್ದರು ಆಗ ನಾನು ಆರೋಪಿ ನಂ.3 ಇವರನ್ನು ನೋಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(ಶ್ರೀಮತಿ ದೀಪಾ ಜಿ ಮನೇರಕರ)**

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.